

ನದಿಯಲ್ಲಿ ರ್‍ಯಾಫ್ಟಿಂಗ್



ನಾಲ್‌ದೇಹರಾದ ಕುದುರೆ ಸವಾರಿ

# ದೇವಭೂಮಿ ಹಿಮಾಚಲದಲ್ಲಿ..

(8ನೇ ಪುಟದಿಂದ)

2,076 ಮೀಟರ್ ಎತ್ತರಕ್ಕೆ ರೈಲು ಏರುತ್ತದೆ. ಶಿವಾಲಿಕ್ ಎಕ್ಸ್‌ಪ್ರೆಸ್‌ನಂತಹ ಸಾದಾ ರೈಲಿನಿಂದ ಆರಂಭಿಸಿ, ಶಿವಾಲಿಕ್ ಡೀಲಕ್ಸ್, ಶಿವಾಲಿಕ್ ಪ್ಯಾಲೇಸ್‌ನಂತಹ ಐಷಾರಾಮಿ ರೈಲುಗಳೂ ಈಗ ಲಭ್ಯ.

ಶಿಮ್ಲಾ ತಲುಪಿದ ಸಮಯ ಮಧ್ಯಾಹ್ನ 1.30. ಬಾಯಿಂದ ಹೊಗೆ ಬಿಡುತ್ತಾ ಬಿಸಿ ಬಿಸಿ ಊಟ ಮಾಡಿ, ನಮ್ಮ ಯೋಜನೆಯಂತೆ ಆ ದಿನವೇ ಹತ್ತಿರವಿದ್ದ ನಾಲ್ಕೂ ದೇವಾಲಯಗಳನ್ನು ಸಂದರ್ಶಿಸಿದೆವು. ಗೊತ್ತಿರದಿದ್ದರೆ ಪ್ರವಾಸಿ ಏಜೆಂಟರು ಈ ಒಂದೊಂದು ದೇವಾಲಯದ ದರ್ಶನವನ್ನೂ ಅರ್ಧ ದಿನದ ಟೂರ್ ಆಗಿ ಮಾರ್ಪಡಿಸುವ ಅಪಾಯವಿದೆ. ಕಾಳಿಬಾರಿ, ತಾರಾದೇವಿ, ಸಂಕಟ ಮೋಚನ್ ಎಂಬ ಹನುಮಂತನ ದೇವಸ್ಥಾನ ಮತ್ತು ಶಿಮ್ಲಾದ ಅತಿ ಎತ್ತರದ ತಾಣವಾದ 'ಜಕ್ಕೂ' ದೇವಸ್ಥಾನ– ಎಲ್ಲವೂ 'ದೇವರ ಸ್ಥಾನ' ಎಂಬುದರೊಂದಿಗೆ ಶಿಮ್ಲಾದ ಕಣಿವೆಯ ಅದ್ಭುತ ನೋಟವನ್ನು, ಪ್ರಕೃತಿ ಸೌಂದರ್ಯವನ್ನು ಪಕ್ಷಿನೋಟದೊಂದಿಗೆ ತೋರುವ ತಾಣಗಳೂ ಹೌದು.

'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್' ಕಟ್ಟಡ ಮೊದಲು ವೈಸ್‌ರಾಯ್‌ಗಳ ವಾಸಸ್ಥಾನವಾಗಿತ್ತು. ನಂತರ ರಾಷ್ಟ್ರಪತಿಗಳ ಬೇಸಿಗೆ ಮನೆಯಾಗಿದ್ದ ಈ ಭವ್ಯ ಕಟ್ಟಡ ಇದೀಗ ಉನ್ನತ ಅಧ್ಯಯನಗಳಿಗಾಗಿ ಮೀಸಲಾಗಿದೆ. ಶಿಮ್ಲಾ ಒಪ್ಪಂದ, ಪಾಕಿಸ್ತಾನ –ಭಾರತ ವಿಭಜನೆಗಳ ಒಪ್ಪಂದಕ್ಕೆ ಸಹಿ ಬಿದ್ದ ಮಹತ್ವದ ಸ್ಥಳವಿದು. ಎರಡನೇ ದಿನ ನಾವು ಹೋದದ್ದು ನಾಲ್‌ದೇಹರಾ ಎಂಬ ಗಾಲ್ಫ್ ಮೈದಾನಕ್ಕೆ. ದೇವದಾರುಗಳ ತೋಪು ಪರ್ವತದ ತುಂಬಾ ಹಬ್ಬಿರುವ ಈ ಸ್ಥಳದ ವೀಕ್ಷಣೆ ಕುದುರೆಗಳ ಮೇಲೆ ಕುಳಿತೇ ಸವಿಯಬೇಕು. ನಾಗದೇವರ ಹೆಸರಿನಿಂದ ಬಂದ ಈ ನಾಲ್‌ದೇಹರಾದಲ್ಲಿ ಪಿಕ್‌ನಿಕ್‌ಗಾಗಿ ಟೆಂಟ್ ಹಾಕಬಹುದು. ದೇವದಾರುಗಳ ಮರಗಳಂತೂ ಗಗನಚುಂಬಿಯೇ. ಲಾರ್ಡ್ ಕರ್ಜನ್ ಈ ಪ್ರಕೃತಿಯಿಂದ ಎಷ್ಟು ಪ್ರಭಾವಿತನಾದನೆಂದರೆ ತನ್ನ ಮಗಳಿಗೆ 'ಅಲೆಕ್ಸಾಂಡ್ರಾ ನಾಲ್‌ದೇಹರಾ' ಎಂದೇ ಹೆಸರಿಟ್ಟನಂತೆ!

ನಾಲ್‌ದೇಹರಾದ ಕುದುರೆ ಸವಾರಿ ಮುಗಿಸಿ ನಾವು ಹೋದದ್ದು, ಅದಕ್ಕಿಂತ ಕೆಳಗಿನ 'ತತ್ತಾಪಾನಿ'ಗೆ . ತತ್ತಾಪಾನಿಗೆ ಹೋಗುವ ದಾರಿಯಲ್ಲಿ ವಿಶಾಲ 'ಸಟ್ಲಜ್' ನದಿ ಕಾಣಸಿಗುತ್ತದೆ. ಚಳಿಗಾಲದಲ್ಲಿ ನದಿಯ ಸುಳಿ ಕಡಿಮೆ. ಹಾಗಾಗಿ 'ರಿವರ್ ರ್‍ಯಾಫ್ಟಿಂಗ್' ಸಾಹಸಿಗರಿಗೆ ಅಷ್ಟೇನೂ ಮಜಾ ನೀಡದಿದ್ದರೂ, ಮಕ್ಕಳಿಗೆ, ಮೊದಲ ಬಾರಿ 'ರ್‍ಯಾಫ್ಟಿಂಗ್' ಮಾಡುವವರಿಗೆ ಸುರಕ್ಷಿತ. ಲೈಫ್ ಜ್ಯಾಕೆಟ್ ಧರಿಸಿ ಕುಳಿತು ತಣ್ಣನೆಯ ನೀರಿನಲ್ಲಿ ತೇಲುವ ಮಜಾ ಮನಸ್ಸಿಗೆ ಮುದ ನೀಡಿತು. ಸಟ್ಲಜ್ ವಿಶಾಲ, ಸ್ವಚ್ಛ, ಎರಡೂ ಕಡೆ ಬಿಳಿಯ ಗುಂಡು ಕಲ್ಲುಗಳನ್ನು ಹೊಂದಿದ ನದಿ.

ಈ ಸಟ್ಲಜ್ ನದಿಯ ಕೊನೆ ಬಂದು ತಲುಪಿದರೆ ಕೊರೆಯುವ ತಣ್ಣನೆಯ ನೀರು! ಅಲ್ಲಿಂದ ಕಾಲು ತೆಗೆದು ಈ ಕಡೆ ಇಟ್ಟರೆ ಕುದಿಯುವ ಬಿಸಿನೀರಿನ ಬುಗ್ಗೆ! ಸಣ್ಣ ಸಣ್ಣ ಪ್ರಾಕೃತಿಕ ಬಾತ್‌ಟಬ್ಬುಗಳು! ಗಂಧಕದ ಕಾರಣದಿಂದ ಚರ್ಮ–ಮೂಳೆ ರೋಗಗಳನ್ನು ಗುಣಪಡಿಸುವ ಶಕ್ತಿ ಈ ನೀರಿಗೆ. ಕಾಲಿಟ್ಟಾಗ ಬೆಳ್ಳಿಕಾಲುಂಗುರ ಕೂಡ ಹಳದಿ ಬಣ್ಣ! ತೊಳೆದ ಮೇಲೆ ಮತ್ತೆ ಬೆಳ್ಳಿಗೇ ತಿರುಗಿತು ಸಧ್ಯ!

ಮರುದಿನದ ನಮ್ಮ ಪಯಣ ಹಿಮದಾಟಕ್ಕಾಗಿ ಕುಫ್ರಿ–ನಾರ್‌ಕಂಡಗಳಿಗೆ. ಹೋಗುವಾಗಲೇ ಹಿಮದ ರಾಶಿ. ಮಕ್ಕಳಿಗೆ 'ಸ್ನೋಮ್ಯಾನ್' ಮಾಡುವ ಹುಮ್ಮಸ್ಸು. ಕುದುರೆಯ ಮೇಲೆ ಕಡಿದಾದ ಪರ್ವತ ಹಿಮದ ಮಧ್ಯೆ ಹತ್ತುವ ಮ(ಸ)ಜಾ! ಎಲ್ಲಿ ಕುದುರೆ ಜಾರುತ್ತದೆಯೋ, ನಾವು ಬೀಳುತ್ತೇವೆಯೋ ಎಂಬ ಹೆದರಿಕೆ ಮಧ್ಯೆಯೇ ಕುಫ್ರಿ ತಲುಪಿದೆವು. ಹಿಮ ಬೀಳುವ ಎರಡು–ಮೂರು ತಿಂಗಳುಗಳಲ್ಲೇ ದುಡ್ಡು ಮಾಡುವ ಅನಿವಾರ್ಯತೆಯಿಂದ ಇಲ್ಲಿ ಹಲವು ವಿಧದ ಚಟುವಟಿಕೆಗಳು. ಯಾಕ್ ಮೇಲಿನ ಸವಾರಿ, ಹಿಮಾಚಲದ ಸಾಂಪ್ರದಾಯಿಕ ಉಡುಗೆ ಧರಿಸಿ ಫೋಟೋ, ಸ್ಲೆಜ್ ರೈಡಿನಲ್ಲಿ ಸೇಬು ವನಗಳ ವೀಕ್ಷಣೆ, ಗೋ ಕಾರ್ಟಿಂಗ್, ಸ್ಕೀಯ್ ಹೀಗೆ ಎಲ್ಲವೂ ಲಭ್ಯ.

ಜಾಡ್‌ವಿಕ್ ಜಲಪಾತ, ಸಮ್ಮರ್‌ಹಿಲ್ ವಿಶ್ವವಿದ್ಯಾಲಯ ನೋಡಿ ಹೋಟೆಲ್ಲಿಗೆ ಹಿಂದಿರುಗಿದೆವು. ಶಿಮ್ಲಾದ ರಸ್ತೆ ಅದರಲ್ಲೂ 'ಮಾಲ್ ರೋಡ್' ಚಳಿಯಿಂದ ಮಿಂದು, ಸ್ವಚ್ಛವಾಗಿ, ವಾಹನಗಳೇ ಇಲ್ಲದೆ ಮಕ್ಕಳು ಓಡಾಡಲು ನಿರಾಳವಾಗಿತ್ತು. ಹಿಮಾಚಲದ ಜನರೂ ಸ್ನೇಹಮಯಿಗಳೇ. ಎರಡನೇ ಬಾರಿಗೆ ಹೋದರೂ ಶಿಮ್ಲಾ ಭೇಟಿ 'ಬೋರ್' ಹೊಡೆಸಲಿಲ್ಲ.